
## ಪದಬಂಧ



ಎಡದಿಂದ ಬಲಕ್ಕೆ:

1. ಸರ್ವರಿಗೂ ಕ್ಷೇಮಭಂಗ–'ಹಾವಿನೊಡನೆ ಸ್ನೇಹ' (4)
3. ಈ ವಿಗ್ರಹದಲ್ಲಿ ಕೆತ್ತಿರುವ ದೇವರ ಅವತಾರ ಗೊತ್ತೇ? (3)
4. ಬೃಂದಾವನದ ಬಳಿಯಲ್ಲೇ ಸುವಾಸನಾ ಎಲೆ–ಸಸ್ಯ (3)
6. ನಾಳೆಯಿಂದ ಇರುವಲ್ಲೇ ಭದ್ರವಾಗಿ ವಾಸ ಆರಂಭಿಸು (4)
7. ಆತಂಕಕ್ಕೆ ಕಾರಣನಾದದ್ದು ಯಮನೇ ಅಲ್ಲವೇ? (3)
9. ಮುಂದಕ್ಕೇನು ಮಾಡಲಿದ್ದಾನೆ ಆ ವೃದ್ಧ? (3)
11. ಜೋಳಿಗೆ ಹಿಡಿದು ಬಂದವನೊಡನೆ ಕಲಹವೇ? (3)
13. ಸಂಹರಿಸ ಬಂದವನೆದುರು ಇದೆಂಥ ಸುಂದರ ನಗು? (3)
15. ಸಂಕುಚಿತರ ಅಕಾರ್ಯಗಳಿಗೆ ವಿಪತ್ತು ಬಂತು (4)
17. ಮಡಿಲ ಮಗುವಿನೊಡನೆ ಮೆತ್ತಗಿನ ಮಾತು (3)
18. ಆತನನ್ನು ಸೋಲಿಸುವುದೇ? ತುಂಬ ಸುಲಭ ಬಿಡಿ (3)
19. ತೆಳ್ಳಗಿರುವವನ ಜೊತೆಗಷ್ಟೇ ಗಾಢ ಸ್ನೇಹವೇ? (4)

ಮೇಲಿಂದ ಕೆಳಕ್ಕೆ:

1. ಹೊಸದನ್ನೆಲ್ಲ ಪ್ರತ್ಯೇಕಿಸಲು ತಾಳ್ಮೆ ಬೇಕೇ ಬೇಕು (3)
2. ಗೋವಿಂದರಾಯರು ಬಂದರೆ ಹೆದರಿಸು (3)
3. ವಜ್ರ ತರುವ ಕೆಲಸವನ್ನು ಸೇರಿಸುವಂತಿಲ್ಲ (3)
5. ಗೆದ್ದು ಬಂದವನಿಗೆ ಬಹುಮಾನ ದುಡ್ಡು–ಕಾಸು (3)
7. ಅಂಜುವವನ ಜೇಬು ತೆಗೆದರೆ ತಾವರೆ ಬಂದೀತೇ? (3)
8. ಕೇಳುವವರಿಗೆ ಮಾತ್ರ ಅಲ್ಲಿ ಸಿಕ್ಕೀತು ಊಟ (3)
9. ಮನಸ್ಸು ಕೆಟ್ಟರೆ ಬರೀ ಕೋಪ (3)
10. ಕಳ್ಳನಿಗೆ ಸಿಕ್ಕಿದ್ದು ಪುಟ್ಟ ಪೂಜಾ ಬಿಂದಿಗೆ (3)
12. ಮರುಗುವ ಗುಣ ಇಲ್ಲದ್ದೇ ಆತನ ಹೆಚ್ಚುಗಾರಿಕೆ (3)
14. ಹೊರೆ ಹೆಚ್ಚಿಸುವುದಲ್ಲ, ಗಾಳಿಯಲ್ಲಿ ತೇಲುವಂತೆ ಮಾಡು (3)
15. ಸಾರು–ಅನ್ನ ಅಡಿಗೆಯ ಜೊತೆಗೆ ವ್ಯಂಜನ (3)
16. ಸಾರಥಿಗೆ ಸಂದ ಹಣಕ್ಕೆ ದಾಖಲೆ ಎಲ್ಲಿ? (3)

### 04–12–14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಶಾಶ್ವತ; 3. ನಿರಭ್ರ; 4. ವರ್ಣನೆ; 6. ಶಿವಾಲಯ; 8. ಸಾವುಕಾರ; 10. ಧನಪತಿ; 12. ಕಲಿಗಾಲ; 16. ಗಟಾರ; 17. ಜಖಿಸು; 18. ಕರ್ಕಾಟಕ.

ಮೇಲಿಂದ ಕೆಳಕ್ಕೆ:

1. ಅಭ್ರಕ; 2. ತವರು; 3. ನಿರ್ಮಲ; 5. ನೆರವು; 6. ಶಿಲಾಯುಧ; 7. ಯಥಾರೀತಿ; 8. ಸಾರ್ವತ್ರಿಕ; 9. ರಮ್ಯಕಾಲ; 11. ಪನ್ನಗ 13. ಲಿಖಿಸು; 14. ಮಾರಕ; 15. ರಜಕ


## ಪ್ರಶ್ನಾಂಕಣ

# ಕಪ್ಪೆಗಳಲ್ಲಿ ವಿಷ

ಅದು ಹೇಗೇ ಇರಲಿ, ಒಂದಂಶ ಸ್ಪಷ್ಟ: ಧರೆಯಲ್ಲಿರುವ ಸಕಲ ಕಪ್ಪೆಗಳೂ ವಿಷಕರ ಅಲ್ಲ. ಈವರೆಗೆ ಗುರುತಿಸಲಾಗಿರುವ 2500 ಪ್ರಭೇದಗಳಲ್ಲಿ 135 ಪ್ರಭೇದಗಳು ಮಾತ್ರ ವಿಷಗಪ್ಪೆಗಳಾಗಿವೆ. ಇನ್ನೂ ಒಂದು ವಿಶೇಷ ಏನೆಂದರೆ ವಿಷಗಪ್ಪೆಗಳ ಅಷ್ಟೂ ಪ್ರಭೇದಗಳು ಮಧ್ಯ ಅಮೆರಿಕದ ವೃಷ್ಟಿವನಗಳಿಗಷ್ಟೇ ಸೀಮಿತವಾಗಿವೆ. ಅತ್ಯುಗ್ರ ವಿಷದ ಗ್ರಂಥಿಗಳು ಈ ಕಪ್ಪೆಗಳ ಚರ್ಮದೆಲ್ಲೆಡೆ ಹರಡಿವೆ. ಆಶ್ಚರ್ಯ ಏನೆಂದರೆ ಇಡೀ ಜೀವಲೋಕದಲ್ಲಿನ ಬೇರೆ ಯಾವುದೇ ವಿಷ ಪ್ರಾಣಿಯ ಎಷ್ಟೇ ತೀಕ್ಷ್ಣ ವಿಷವನ್ನೂ ಈ ಕಪ್ಪೆಗಳ ವಿಷಕ್ಕೆ ಹೋಲಿಸುವಂತಿಲ್ಲ. ಏಕೆಂದರೆ ಇಂಥ ಕಪ್ಪೆಗಳ ಒಂದೇ ಒಂದು ಗ್ರಾಂ ವಿಷ ಒಂದು ಲಕ್ಷ ಮನುಷ್ಯರ ಪ್ರಾಣ ತೆಗೆಯಬಲ್ಲದು!

ಇದನ್ನು ತಿಳಿದೇ ಪ್ರಾಚೀನ ಕಾಲದಿಂದಲೂ ಮಧ್ಯ ಅಮೆರಿಕದ ವೃಷ್ಟಿವನಗಳಲ್ಲಿ ನೆಲೆಸಿರುವ 'ಕಾಡು ಜನ' ಇಂಥ ವಿಷಗಪ್ಪೆಗಳನ್ನು ಎಲೆಗಳಲ್ಲಿ ಹಿಡಿದು ಬಾಣ–ಈಟಿಗಳ ಮುಂತುದಿಗಳನ್ನು ಈ ಕಪ್ಪೆಗಳ ಮೈಮೇಲೆ ಸವರಿ ಆ ಬೇಟೆ ಸಾಧನಗಳನ್ನು ವಿಷಯುಕ್ತವಾಗಿಸುತ್ತಿದ್ದರು; ಈಗಲೂ ಕೂಡ. ಅಂತಹ ಬಾಣ–ಈಟಿಗಳು ನಾಟಿದ ಪ್ರಾಣಿಗಳು ಕ್ಷಣಗಳಲ್ಲೇ ನೆಲಕ್ಕೊರಗುವುದು ನಿಸ್ಸಂಶಯ. ಈ ವಿಧದ ಬಳಕೆಯಿಂದಾಗಿಯೇ ಇಂಥ ಕಪ್ಪೆಗಳಿಗೆ 'ಪಾಯ್ಸನ್ ಆ್ಯರೋ ಫ್ರಾಗ್ಸ್' ಅಥವಾ 'ಪಾಯ್ಸನ್ ಡಾರ್ಟ್ ಫ್ರಾಗ್ಸ್' ಎಂದೇ ಹೆಸರು.

ಮತ್ತೊಂದು ವಿಸ್ಮಯ ಏನೆಂದರೆ ಈ ಎಲ್ಲ ವಿಷಗಪ್ಪೆ ಪ್ರಭೇದಗಳೂ 'ವಾಮನ ಮೂರ್ತಿಗಳು.' ಅವುಗಳದು ಕನಿಷ್ಠ ಅರ್ಧ ಅಂಗುಲದಿಂದ ಗರಿಷ್ಠ ಎರಡು ಅಂಗುಲ ಉದ್ದ ಮೀರದ ಶರೀರ. ಜೊತೆಗೆ ಅವುಗಳ ವಿಷ ಸ್ವರೂಪ ಜಾಹೀರಾಗುವಂತೆ ನಿಸರ್ಗವೇ ಅವಕ್ಕೆ ಗಾಢ ವರ್ಣಗಳ ಚುಕ್ಕಿ ಮಚ್ಚೆ ಪಟ್ಟೆಗಳ ವಿಕಾರ ವಿಲಕ್ಷಣ ಘೋರ ಭಯಂಕರ ಚರ್ಮದುಡುಗೆಗಳನ್ನು ತೊಡಿಸಿದೆ (ಚಿತ್ರ 1,2); ಹಾಗಾಗಿ ಯಾವ ಬೇಟೆಗಾರ ಪ್ರಾಣಿಯೂ ಸನಿಹವು ಬರದ ನಿರ್ಭೀತ ಬದುಕು!



ಅಂಥ ವಿಷ ಈ ಕಪ್ಪೆಗಳಲ್ಲಿ ತಯಾರಾಗುವುದು ಹೇಗೆ?

ವಾಸ್ತವವಾಗಿ ಈ ಕಪ್ಪೆಗಳ ಆಹಾರವೇ ಅವುಗಳಲ್ಲಿನ ವಿಷ ಸಂಚಯದ ಮೂಲ. 'ಆ್ಯರೋಪಾಯ್ಸನ್ ಫಾಗ್'ಗಳೆಲ್ಲವೂ ವಿಷಮಯ ಕಟ್ಟಿರುವೆಗಳನ್ನೂ, ಸ್ಪ್ರಿಂಗ್ ಟೇಲ್'ಗಳನ್ನೂ ತಿನ್ನುತ್ತವೆ. ಆ ಜೀವಿಗಳ ವಿಷ ಹೇಗೋ ಕಪ್ಪೆಗಳಿಗೆ ಹಾನಿಮಾಡದೆ ಅವುಗಳ ಚರ್ಮದಲ್ಲಿ ಸಂಗ್ರಹವಾಗುತ್ತವೆ. ಮಹದಚ್ಚರಿ ಏನೆಂದರೆ ಇವೇ ವಿಷಗಪ್ಪೆಗಳನ್ನು ಹಿಡಿದು ತಂದು ಅವಕ್ಕೆ ವಿಷರಹಿತ ಕೀಟಗಳನ್ನೇ ತಿನ್ನಿಸುತ್ತಹೋದರೆ ಕ್ರಮೇಣ ಅವುಗಳ ವಿಷ ಸೌಮ್ಯವಾಗುತ್ತ ಕಡೆಗೆ ವಿಷವೇ ಇಲ್ಲವಾಗುತ್ತದೆ. ಆದರೆ ಅವುಗಳ ಭೀಕರ ಚಿತ್ತಾರಗಳ ರುದ್ರ ರೂಪ ಮಾತ್ರ ಹಾಗೆಯೇ ಉಳಿದಿರುತ್ತದೆ. ಎಂಥ ಸೋಜಿಗ!

■ ಎನ್. ವಾಸುದೇವ್